ಕರ್ನಾಟಕ ಲೋಕ ಸೇವಾ ಆಯೋಗ

ಸಂಖ್ಯೆ: ಇ(1)3827/2020-21/ಪಿಎಸ್ ಸಿ ದಿನಾಂಕ: 07-12-2020

ಅಧಿಸೂಚನೆ

ಕರ್ನಾಟಕ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಲ್ಲಿನ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ ನೇಮಕಾತಿಯ ಮುಖ್ಯ ಪರೀಕ್ಷೆಗೆ (MAIN EXAMINATION) ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಸೂಚನೆಗಳು

| | |
|---|---|
| ಆನ್ ಲೈನ್ ನಲ್ಲಿ ಅರ್ಜಿ ಭರ್ತಿ ಮಾಡುವ ಪ್ರಾರಂಭದ ದಿನಾಂಕ | 09-12-2020 |
| ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 23 -12-2020 |
| ಶುಲ್ಕ ಪಾವತಿಸಲು ಕೊನೆಯ ದಿನಾಂಕ | 24 -12-2020 |
| ಅರ್ಜಿಯ ಪ್ರಿವ್ಯೂವನ್ನು Download ಮಾಡಿಕೊಂಡು ಸ್ವಯಂ ದೃಢೀಕರಿಸಿದ ಎಲ್ಲಾ ಪ್ರಮಾಣ ಪತ್ರಗಳ ಪ್ರತಿಗಳನ್ನು (ದ್ವಿಪ್ರತಿಯಲ್ಲಿ) ಅರ್ಜಿಯೊಂದಿಗೆ ಲಗತ್ತಿಸಿ, ಆಯೋಗಕ್ಕೆ ಖುದ್ದಾಗಿ ಅಥವಾ ಸ್ಪೀಡ್ ಪೋಸ್ಟ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 29 -12-2020 |

1. ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) ನಿಯಮಗಳು 2013 ಮತ್ತು ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2012ರನ್ವಯ ಅಧಿಸೂಚನೆ ಸಂಖ್ಯೆ :ಇ(1)227/2018-19/ ಪಿಎಸ್ಸಿ, ದಿನಾಂಕ:05-09-2018ರಲ್ಲಿ ಅಧಿಸೂಚಿಸಲಾದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ 24 ಹುದ್ದೆಗಳಿಗೆ ದಿನಾಂಕ: 11-10-2020ರಂದು ಪೂರ್ವಭಾವಿ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ದಿನಾಂಕ:05-11-2020ರಂದು 1:10 ಅನುಪಾತದಲ್ಲಿ ಪೂರ್ವಭಾವಿ ಪರೀಕ್ಷೆಯಿಂದ ಮುಖ್ಯ ಪರೀಕ್ಷೆಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಮುಖ್ಯ ಪರೀಕ್ಷೆಯನ್ನು ದಿನಾಂಕ:27-01-2021 ರಿಂದ 30--01-2021ರವರೆಗೆ ನಡೆಸಲು ಉದ್ದೇಶಿಸಲಾಗಿದೆ.

2. ಅಭ್ಯರ್ಥಿಗಳು ಆನ್ ಲೈನ್ ಮೂಲಕ (**ONLINE**) ಮುಖ್ಯ ಪರೀಕ್ಷೆಯ ಅರ್ಜಿ ಭರ್ತಿ ಮಾಡುವ ಮುನ್ನ ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಗಿ ಓದಿ ಪಾಲಿಸತಕ್ಕದ್ದು:

ಹಂತ 1:- ಅಭ್ಯರ್ಥಿಗಳು ಆಯೋಗದ ಅಧಿಕೃತ ವೆಬ್ ಸೈಟ್ **http://kpsc.kar.nic.in/apply online** ಲಿಂಕ್ ಅನ್ನು ತೆರೆದ ಕೂಡಲೇ ಕಂಪ್ಯೂಟರ್ ಪರದೆಯ ಮೇಲೆ **'Application For Assistant Conservator of Forest (Main Examination)'** ಎಂದು ಮೂಡುತ್ತದೆ ಮತ್ತು ಅಭ್ಯರ್ಥಿಗಳಿಗೆ ಸೂಚನೆಗಳು/ಪರೀಕ್ಷಾ ಶುಲ್ಕದ ವಿವರಗಳು ಲಭ್ಯವಾಗಲಿದ್ದು, ಅಭ್ಯರ್ಥಿಗಳು ಅರ್ಜಿ ಭರ್ತಿ ಮಾಡುವ ಮುನ್ನ ನೀಡಿರುವ ಸೂಚನೆಗಳಲ್ಲಿನ ಎಲ್ಲಾ ವಿವರಗಳನ್ನು ಮತ್ತು ಅರ್ಜಿ ಸಲ್ಲಿಸುವ ಸೂಚನೆ/ವಿಧಾನಗಳನ್ನು ತಪ್ಪದೇ ಓದಿಕೊಂಡು ಅದರಂತೆ ಅರ್ಜಿಯನ್ನು ಭರ್ತಿ ಮಾಡತಕ್ಕದ್ದು.

ಹಂತ 2:- ಅಭ್ಯರ್ಥಿಯು ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಬಳಸಿರುವ User name ಹಾಗೂ Password ಅನ್ನು ಬಳಸಿ ಆಯೋಗದ ಅಧಿಕೃತ ವೆಬ್ ಸೈಟ್ http://kpsc.kar.nic.in/apply ನಲ್ಲಿ ಲಾಗಿನ್ ಆಗಬೇಕು. ಲಾಗಿನ್ ಆದ ನಂತರ ಚಾಲ್ತಿಯಲ್ಲಿರುವ ಅಧಿಸೂಚನೆಗಳ ಪಕ್ಕದಲ್ಲಿ click here to apply link ಲಭ್ಯವಿದೆ. ಈ ಅರ್ಜಿಯಲ್ಲಿ ಅಭ್ಯರ್ಥಿಗಳು ಅವರ ಪೂರ್ವಭಾವಿ ಪರೀಕ್ಷೆಯ ಅರ್ಜಿಯಲ್ಲಿ ಭರ್ತಿ ಮಾಡಿದ ಎಲ್ಲಾ ವೈಯುಕ್ತಿಕ ವಿವರಗಳು,ವಿದ್ಯಾರ್ಹತೆ, ಕೋರಿದ ಮೀಸಲಾತಿ ಹಾಗೂ ಸರ್ಕಾರಿ ಸೇವೆಯ ವಿವರಗಳು (ಸೇವೆಯಲ್ಲಿ ಇರುವವರಿಗೆ) ಮುದ್ರಿತವಾಗಿದ್ದು, ಈ ಅರ್ಜಿಯಲ್ಲಿ ಉತ್ತರಿಸುವ ಭಾಷಾ ಮಾಧ್ಯಮ

ಮತ್ತು ಪರೀಕ್ಷಾ ಕೇಂದ್ರದ ವಿವರವನ್ನು ಭರ್ತಿ ಮಾಡತಕ್ಕದ್ದು. ಅರ್ಜಿಯಲ್ಲಿ ಭರ್ತಿ ಮಾಡಿದ ನಂತರದಲ್ಲಿ ಯಾವುದೇ ಕಾರಣಕ್ಕೆ ಬದಲಿಸಲು ಅವಕಾಶ ಇರುವುದಿಲ್ಲ.

ಹಂತ 3:- ಅರ್ಜಿಯನ್ನು ಭರ್ತಿ ಮಾಡಿದ ನಂತರ ನಮೂದಿಸಿರುವ ವಿವರಗಳನ್ನು ಮತ್ತೊಮ್ಮೆ ಕೂಲಂಕಷವಾಗಿ ಪರಿಶೀಲಿಸಬೇಕು. ಮುಖ್ಯ ಪರೀಕ್ಷೆಯ ಅರ್ಜಿಯಲ್ಲಿ ನಮೂದಿಸಿರುವ ವಿವರಗಳಲ್ಲಿ ಯಾವುದಾದರೂ ತಿದ್ದುಪಡಿ ಮಾಡಬೇಕಾದಲ್ಲಿ Edit button ಮೇಲೆ ಕ್ಲಿಕ್ ಮಾಡಿ ಅಗತ್ಯ ತಿದ್ದುಪಡಿಗಳನ್ನು ಮಾಡಬಹುದು. 'Submit' Button ಅನ್ನು ಒತ್ತಿದ ಮೇಲೆ ಯಾವುದೇ ತಿದ್ದುಪಡಿಗಳನ್ನು ಮಾಡಲು ಅವಕಾಶವಿರುವುದಿಲ್ಲ.ತದನಂತರ Print Button ನ್ನು ಒತ್ತಿ ಮುಖ್ಯ ಪರೀಕ್ಷೆಯ ಅರ್ಜಿಯನ್ನು (Application Preview) ಹಾಗೂ ಶುಲ್ಕ ಪಾವತಿಸಲು ಚಾಲನ್ ಅನ್ನು ಡೌನಲೋಡ್ ಮಾಡಿಟ್ಟುಕೊಳ್ಳತಕ್ಕದ್ದು.

ಹಂತ 4:- ಪರೀಕ್ಷಾ ಶುಲ್ಕವನ್ನು ನೆಟ್ ಬ್ಯಾಂಕಿಂಗ್/ಡೆಬಿಟ್ ಕಾರ್ಡ್/ಕ್ರೆಡಿಟ್ ಕಾರ್ಡ ಮೂಲಕ ಅಥವಾ ಸಿ ಎಸ್ ಸಿ (ಕಾಮನ್ ಸರ್ವೀಸ್ ಸೆಂಟರ್) ಗಳಲ್ಲಿ ಪಾವತಿಸಬಹುದು. ಬೇರೆ ಯಾವುದೇ ತಂತ್ರಾಂಶ ಬಳಸಿ ಶುಲ್ಕ ಪಾವತಿಸಲು ಅವಕಾಶವಿಲ್ಲ ಹಾಗೂ ಇದು ತಿರಸ್ಕೃತವಾಗುವುದು.

ಶುಲ್ಕ ಪಾವತಿಸಲು ಅಭ್ಯರ್ಥಿಗಳು ಈ ಕೆಳಕಂಡ ಪದ್ಧತಿಯನ್ನು ಪಾಲಿಸಬೇಕು:-

Login ಆದ ನಂತರ ಎಡ ಭಾಗದಲ್ಲಿ My Account link ಲಭ್ಯವಿದ್ದು ಈ My Account link ಅನ್ನು ಒತ್ತಬೇಕು. ಅಭ್ಯರ್ಥಿಯು ವಿವಿಧ ಅಧಿಸೂಚನೆಗಳಿಗೆ ಸಲ್ಲಿಸಿದ ಅರ್ಜಿಗಳ ಹಾಗೂ ಶುಲ್ಕ ಪಾವತಿಸಿದ ವಿವರವನ್ನು ನೋಡಬಹುದು. ಶುಲ್ಕ ವಿವರಗಳಲ್ಲಿ Unpaid ಎಂದು ನಮೂದಿಸಿರುವ ಅರ್ಜಿಗಳ ಎದುರು Pay Now link ಲಭ್ಯವಿರುತ್ತದೆ. Pay Now link ಅನ್ನು ಒತ್ತಿದಲ್ಲಿ ಮೂರು ಆಯ್ಕೆಗಳು ಲಭ್ಯವಾಗುತ್ತದೆ: (ಎ) ನೆಟ್ ಬ್ಯಾಂಕಿಂಗ್ (ಬಿ) ಡೆಬಿಟ್ ಕಾರ್ಡ್ (ಸಿ) ಕ್ರೆಡಿಟ್ ಕಾರ್ಡ್ ಆನ್ ಲೈನ್ ಪಾವತಿಯ ಮಾದರಿಯಲ್ಲಿ ಅಭ್ಯರ್ಥಿಯು ನೆಟ್ ಬ್ಯಾಂಕಿಂಗ್ ಡೆಬಿಟ್ ಕಾರ್ಡ್ ಮತ್ತು ಕ್ರೆಡಿಟ್ ಕಾರ್ಡ್ ಮುಖಾಂತರ ಶುಲ್ಕ ಪಾವತಿಸಬಹುದು. ಪರೀಕ್ಷಾ ಶುಲ್ಕವನ್ನು ಯಾವುದೇ ಕಾಮನ್ ಸರ್ವೀಸ್ ಸೆಂಟರ್ ಗಳಲ್ಲಿ (CSC) ಅಥವಾ ನೆಟ್ ಬ್ಯಾಂಕಿಂಗ್/ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್ ಮೂಲಕ ಸಂದಾಯ ಮಾಡಬಹುದಾಗಿರುತ್ತದೆ. ಶುಲ್ಕವನ್ನು ಪಾವತಿಸದೇ ಇರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಹಂತ 5:- ಶುಲ್ಕ ಪಾವತಿಸಿದ ನಂತರ Online ಅರ್ಜಿಯ ಪ್ರಿವ್ಯೂವನ್ನು Download ಮಾಡಿಕೊಂಡು ತಮ್ಮ ಸಹಿಯೊಂದಿಗೆ ಸ್ವಯಂ ದೃಢೀಕರಿಸಿದ ಎಲ್ಲಾ ಪ್ರಮಾಣ ಪತ್ರಗಳ ಪ್ರತಿಗಳನ್ನು (ದ್ವಿಪ್ರತಿಯಲ್ಲಿ) ಅರ್ಜಿಯೊಂದಿಗೆ ಲಗತ್ತಿಸಿ ನಿಗದಿತ ದಿನಾಂಕ: 29-12-2020ರೊಳಗಾಗಿ ಆಯೋಗಕ್ಕೆ ಖುದ್ದಾಗಿ ಸಲ್ಲಿಸತಕ್ಕದ್ದು ಅಥವಾ ಸ್ಪೀಡ್ ಪೋಸ್ಟ್ ಮೂಲಕ "ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001 ಇಲ್ಲಿಗೆ ರವಾನಿಸತಕ್ಕದ್ದು.

3. ಅಭ್ಯರ್ಥಿಗಳು ಮುಖ್ಯ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
4. ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕ/ಸಮಯದ ನಂತರ ಶುಲ್ಕವನ್ನು ಪಾವತಿಸಲು ಅವಕಾಶವಿರುವುದಿಲ್ಲ. ಡಿ.ಡಿ., ಪೋಸ್ಟಲ್ ಆರ್ಡರ್, ಮನಿ ಆರ್ಡರ್, ಇತ್ಯಾದಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಶುಲ್ಕ ಸಂದಾಯ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ವಿಶೇಷ ಸೂಚನೆ: On-line ಮೂಲಕ ಅರ್ಜಿಯನ್ನು ಭರ್ತಿ ಮಾಡುವ ಸಂದರ್ಭದಲ್ಲಿ ಯಾವುದಾದರೂ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಸಹಾಯವಾಣಿ (Help line) ಸಂಖ್ಯೆ 18005728707 ಅನ್ನು ಸಂಪರ್ಕಿಸಿ ಅಗತ್ಯ ಮಾಹಿತಿ ಪಡೆದು ಅರ್ಜಿ ಭರ್ತಿ ಸಲ್ಲಿಸಬಹುದು.

**5. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಳ (ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕಾತಿ) ಮುಖ್ಯ ಪರೀಕ್ಷೆಯ ವಿವರಗಳು ಈ ಕೆಳಕಂಡಂತಿವೆ:-**

(ಎ) ಲಿಖಿತ ಪರೀಕ್ಷೆ:

<table>
<tr><td colspan="2">ಪತ್ರಿಕೆ /Paper</td><td colspan="2">ಅಂಕಗಳು /Marks</td></tr>
<tr><td colspan="4">ಕಡ್ಡಾಯ ಪತ್ರಿಕೆಗಳು(ಅರ್ಹತಾದಾಯಕ, ಕನಿಷ್ಠ 35%) /Compulsory Papers(Qualifying, with minimum 35%) :</td></tr>
<tr><td colspan="2">ಕನ್ನಡ /Kannada</td><td>100</td><td>ಅವಧಿ 2.00 ಗಂಟೆಗಳು</td></tr>
<tr><td colspan="2">ಇಂಗ್ಲಿಷ್ /English</td><td>100</td><td>ಅವಧಿ 2.00 ಗಂಟೆಗಳು</td></tr>
<tr><td colspan="4">ಐಚ್ಛಿಕ ಪತ್ರಿಕೆಗಳು/ Optional papers</td></tr>
<tr><td colspan="2">ಫಾರೆಸ್ಟ್ರಿ ಪತ್ರಿಕೆ-1/ Forestry - Paper I</td><td>100</td><td>ಅವಧಿ 3.00 ಗಂಟೆಗಳು</td></tr>
<tr><td colspan="2">ಫಾರೆಸ್ಟ್ರಿ ಪತ್ರಿಕೆ-2/ Forestry - Paper II</td><td>100</td><td>ಅವಧಿ 3.00 ಗಂಟೆಗಳು</td></tr>
<tr><td colspan="4">ಅಥವಾ ಈ ಕೆಳಕಂಡ ಯಾವುದಾದರೂ ಎರಡು ಪತ್ರಿಕೆಗಳು(100 ಅಂಕಗಳನ್ನೊಳಗೊಂಡ ಪ್ರತಿ ಪತ್ರಿಕೆ) /or any two papers out of the following of 100 marks each (ಅವಧಿ 3.00 ಗಂಟೆಗಳು )</td></tr>
<tr><td>(a) ಸಸ್ಯಶಾಸ್ತ್ರ /Botany</td><td>(e)</td><td colspan="2">ಭೌತಶಾಸ್ತ್ರ / Physics</td></tr>
<tr><td>(b)ಪ್ರಾಣಿಶಾಸ್ತ್ರ/ Zoology</td><td>(f)</td><td colspan="2">ಕೃಷಿ /Agriculture</td></tr>
<tr><td>(c) ಗಣಿತಶಾಸ್ತ್ರ/ Mathematics</td><td>(g)</td><td colspan="2">ಸಿವಿಲ್ ಇಂಜಿನಿಯರಿಂಗ್/Civil Engineering</td></tr>
<tr><td>(d) ರಸಾಯನಶಾಸ್ತ್ರ/ Chemistry</td><td>(h)</td><td colspan="2">ಪಶು ಸಂಗೋಪನೆ ಮತ್ತು ಪಶು ವೈದ್ಯ ವಿಜ್ಞಾನ/ Animal Husbandry & Veterinary Science</td></tr>
<tr><td colspan="4">ಬಿ. ಎಸ್ಸಿ(ಫಾರೆಸ್ಟ್ರಿ) ಪದವೀಧರರಿಗೆ ಮಾತ್ರ ಫಾರೆಸ್ಟ್ರಿ ಪತ್ರಿಕೆ-1 ಮತ್ತು 2 ಅನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಇರುತ್ತದೆ./Option to select Forestry Paper I & II is restricted to B.Sc., (Forestry) graduates only.</td></tr>
</table>

ಮುಖ್ಯ ಪರೀಕ್ಷೆಯ ಪಠ್ಯಕ್ರಮವನ್ನು ಅನುಬಂಧದಲ್ಲಿರಿಸಲಾಗಿದೆ.

ಟಿಪ್ಪಣಿ:-

(1) ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಗಳೆರಡರಲ್ಲೂ ಮುದ್ರಿಸಲಾಗಿರುತ್ತದೆ. ಅಭ್ಯರ್ಥಿಗಳು ಪತ್ರಿಕೆಯ ಉತ್ತರಗಳನ್ನು ಸಂಪೂರ್ಣವಾಗಿ ಕನ್ನಡ ಅಥವಾ ಆಂಗ್ಲಭಾಷಾ ಮಾಧ್ಯಮದಲ್ಲಿಯೇ ಉತ್ತರಿಸತಕ್ಕದ್ದು.

(2) ಎಲ್ಲಾ ವಿವರಣಾತ್ಮಕ ಉತ್ತರ ಪತ್ರಿಕೆಗಳನ್ನು ವಿದ್ಯುನ್ಮಾನ ಮಾದರಿಯಲ್ಲಿ ಮೌಲ್ಯಮಾಪನ ಮಾಡಲಾಗುವುದು. ( ಸ್ಕ್ಯಾನಿಂಗ್ ಮಾಡಿ **Onscreen Marking** ಮಾಡಲಾಗುವುದು).

(3) ಭಾಷಾ ವಿಷಯಗಳ ಪ್ರಶ್ನೆಪತ್ರಿಕೆಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲ ವಿಷಯಗಳ ಪ್ರಶ್ನೆಪತ್ರಿಕೆಗಳು ಕನ್ನಡ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿ ಇರುತ್ತವೆ. ಕನ್ನಡ ಭಾಷೆಯಲ್ಲಿರುವ ಯಾವುದೇ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಗೊಂದಲವಾದಲ್ಲಿ ಅಭ್ಯರ್ಥಿಗಳು ಆಂಗ್ಲಭಾಷೆಯ ಪ್ರಶ್ನೆಗಳನ್ನು ಸಹ ನೋಡಿಕೊಂಡು, ಪ್ರಶ್ನೆಯನ್ನು ಅರ್ಥೈಸಿಕೊಳ್ಳುವುದು. ಭಾಷಾ ವಿಷಯಗಳನ್ನು ಹೊರತುಪಡಿಸಿ ಅಭ್ಯರ್ಥಿಯು ತನ್ನ ಉಳಿದೆಲ್ಲಾ ಪ್ರಶ್ನೆ ಪತ್ರಿಕೆಗಳನ್ನು

ಸಂಪೂರ್ಣವಾಗಿ ಅರ್ಜಿಯಲ್ಲಿ ಆಯ್ಕೆ ಮಾಡಿಕೊಂಡಿರುವ ಭಾಷಾ ಮಾಧ್ಯಮದಲ್ಲಿಯೇ ಬರೆಯತಕ್ಕದ್ದು. ಆಯ್ಕೆ ಮಾಡಿಕೊಂಡ ಮಾಧ್ಯಮವನ್ನು ಬದಲಾಯಿಸಿದಲ್ಲಿ ಅಥವಾ ಅರ್ಧ ಕನ್ನಡ ಹಾಗೂ ಅರ್ಧ ಆಂಗ್ಲ ಮಾಧ್ಯಮದಲ್ಲಿ ಉತ್ತರಿಸಿದಲ್ಲಿ ಅಂತಹ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಗೊಳಿಸುವುದಿಲ್ಲ. ಆಯ್ಕೆ ಮಾಡಿಕೊಂಡ ಮಾಧ್ಯಮವನ್ನು ಯಾವುದೇ ಹಂತದಲ್ಲಿ ಬದಲಾವಣೆ ಮಾಡಲು ಅವಕಾಶವಿಲ್ಲ.

6. ಶಾರೀರಿಕ ದಾರ್ಢ್ಯತೆ:- ಮುಖ್ಯಪರೀಕ್ಷೆಯಿಂದ ವ್ಯಕ್ತಿತ್ವ ಪರೀಕ್ಷೆಗೆ ಅರ್ಹರಾಗುವ ಎಲ್ಲಾ ಅಭ್ಯರ್ಥಿಗಳಿಗೆ ಶಾರೀರಿಕ ದಾರ್ಢ್ಯತೆ ಪರೀಕ್ಷೆಯನ್ನು ಪೂರ್ವಭಾವಿ ಪರೀಕ್ಷೆಯ ಅಧಿಸೂಚನೆಯ ಕ್ರಮ ಸಂಖ್ಯೆ (09) ಎ, ಬಿ, ಸಿ, ಡಿ ರಲ್ಲಿ ನಡೆಸಲಾಗುವುದು. ನಿರ್ಧಿಷ್ಟವಾದ ದೈಹಿಕ ದಾರ್ಢ್ಯತೆಯನ್ನು ಹೊಂದಿಲ್ಲದ ಅಭ್ಯರ್ಥಿಯು ಹುದ್ದೆಗೆ ಅರ್ಹರಾಗುವುದಿಲ್ಲ.

7. ವ್ಯಕ್ತಿತ್ವ ಪರೀಕ್ಷೆ:-

ಆಯೋಗವು ಗ್ರೂಪ್-'ಎ' ಸೇವೆಗಳ ಖಾಲಿ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿ ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) ನಿಯಮಗಳು 2013 ಮತ್ತು ಕರ್ನಾಟಕ ಅರಣ್ಯ ಇಲಾಖೆ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2012 ರಂತೆ 1:5ರ ಅನುಪಾತದಲ್ಲಿ (B.Sc. Forestry & Non Forestry) ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಕರೆಯಲಾಗುವುದು. ಆಯೋಗವು, ಅಭ್ಯರ್ಥಿಗಳು ಲಿಖಿತ ಪರೀಕ್ಷೆ (ಮುಖ್ಯ ಪರೀಕ್ಷೆ)ಯಲ್ಲಿ ಪಡೆದ ಒಟ್ಟು ಅಂಕಗಳ ಜೇಷ್ಠತೆ ಹಾಗೂ ಚಾಲ್ತಿಯಲ್ಲಿರುವ ಮೀಸಲಾತಿಯನುಸಾರ ಲಭ್ಯವಿರುವ ಹುದ್ದೆಗಳಿಗೆ ಮೀಸಲಿರಿಸಿದ ರಿಕ್ತ ಸ್ಥಾನಗಳಿಗನುಗುಣವಾಗಿ ಅಭ್ಯರ್ಥಿಗಳನ್ನು ವ್ಯಕ್ತಿತ್ವ ಪರೀಕ್ಷೆಗೆ ಆಹ್ವಾನಿಸಲಾಗುವುದು. ವ್ಯಕ್ತಿತ್ವ ಪರೀಕ್ಷೆಯು ಗರಿಷ್ಠ 20 ಅಂಕಗಳನ್ನು ಒಳಗೊಂಡಿರುತ್ತದೆ.

8. ಮುಖ್ಯ ಪರೀಕ್ಷೆಯನ್ನು ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುತ್ತದೆ.

9. ಪರೀಕ್ಷಾ ಕೇಂದ್ರ ಮತ್ತು ದಿನಾಂಕಗಳು ಆಯೋಗದ ವಿವೇಚನಾನುಸಾರವಾಗಿ ಬದಲಾವಣೆಗೆ ಒಳಪಟ್ಟಿರುತ್ತವೆ ಆಯೋಗವು ಅಭ್ಯರ್ಥಿಗೆ ಬೇರೆ ಕೇಂದ್ರವನ್ನು ಸೂಚಿಸಬಹುದು ಅಥವಾ ಪರಿಸ್ಥಿತಿಗನುಗುಣವಾಗಿ ಹೊಸ ಕೇಂದ್ರವನ್ನು ಸೇರಿಸಬಹುದು. ಈ ಸಂಬಂಧದಲ್ಲಿ ಆಯೋಗದ ತೀರ್ಮಾನವೇ ಅಂತಿಮವಾಗಿರುತ್ತದೆ ಮತ್ತು ಈ ವಿಷಯದಲ್ಲಿ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

10. ಮುಖ್ಯ ಪರೀಕ್ಷೆಯ ಅರ್ಜಿಯನ್ನು ಸೂಕ್ತವಾಗಿ ಭರ್ತಿ ಮಾಡಿದ ನಂತರ ಅಭ್ಯರ್ಥಿಗಳು ಅರ್ಜಿಯಲ್ಲಿ ಸಹಿಯನ್ನು, ಜನ್ಮ ದಿನಾಂಕಕ್ಕೆ ಸಂಬಂಧಿಸಿದ, ವಿದ್ಯಾರ್ಹತೆ ಮತ್ತು ಇತರೆ ಮೀಸಲಾತಿ ಪ್ರಮಾಣ ಪತ್ರಗಳು (ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ಟಿ.ಸಿ./ಕ್ಯುಮುಲೇಟೀವ್ ರೆಕಾರ್ಡ್, ಘಟಿಕೋತ್ಸವ/ ಪದವಿ ಪ್ರಮಾಣ ಪತ್ರ, ಜಾತಿ, ಗ್ರಾಮೀಣ, ಕನ್ನಡ ಮಾಧ್ಯಮ, ಮಾಜಿ ಸೈನಿಕ) ಹಾಗೂ ಸಂಬಂಧಿತ ಇತರೆ ದಾಖಲಾತಿಗಳ ಸ್ವಯಂ ದೃಢೀಕೃತ ಪ್ರತಿಗಳನ್ನು ಭರ್ತಿ ಮಾಡಿದ ಮುಖ್ಯ ಪರೀಕ್ಷೆಯ ಅರ್ಜಿಯೊಂದಿಗೆ ಕಡ್ಡಾಯವಾಗಿ ಅಪ್ಲೋಡ್ **(Upload)** ಮಾಡತಕ್ಕದ್ದು.

11. ಭರ್ತಿ ಮಾಡಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಅಭ್ಯರ್ಥಿಯು ಕಡ್ಡಾಯವಾಗಿ ಇಟ್ಟುಕೊಳ್ಳತಕ್ಕದ್ದು. ಉತ್ತರಿಸುವ ಭಾಷಾ ಮಾಧ್ಯಮದ ಬದಲಾವಣೆಗಾಗಿ ಸಲ್ಲಿಸುವ ಕೋರಿಕೆಯನ್ನು ಸ್ವೀಕರಿಸುವುದಿಲ್ಲ. ಆದ್ದರಿಂದ ಅಂಕಣವನ್ನು ಎಚ್ಚರಿಕೆಯಿಂದ ಅರ್ಜಿಯ ಅಂಕಣಗಳಲ್ಲಿ ಭರ್ತಿ ಮಾಡುವುದು.

12. ಪರೀಕ್ಷಾ ಶುಲ್ಕ:-

(ಅ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಮಾಜಿ ಸೈನಿಕ ಅಭ್ಯರ್ಥಿಗಳಿಗೆ ರೂ. 300/-

(ಆ) ಇತರೆ ಅಭ್ಯರ್ಥಿಗಳಿಗೆ ರೂ. 500/-

ವಿಶೇಷ ಸೂಚನೆ: ರೂ. 35/-ರ ಪ್ರಕ್ರಿಯೆ ಶುಲ್ಕ **(processing fees)** ವನ್ನು ಎಲ್ಲಾ ಅಭ್ಯರ್ಥಿಗಳು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಮಾಜಿ ಸೈನಿಕ ಹಾಗೂ ಅಂಗವಿಕಲ ಅಭ್ಯರ್ಥಿಗಳು ಸೇರಿದಂತೆ) ಕಡ್ಡಾಯವಾಗಿ ಪಾವತಿಸತಕ್ಕದ್ದು, ಪಾವತಿಸದಿದ್ದಲ್ಲಿ ಅವರ ಅರ್ಜಿಯನ್ನು ತಿರಸ್ಕರಿಸಲಾಗುವುದು.

13. ಮುಖ್ಯ ಪರೀಕ್ಷೆಯ ಅರ್ಜಿಯ ಅಂಕಣ (01) ರಿಂದ (08) ಇವುಗಳ ವಿವರಗಳನ್ನು ಪೂರ್ವಭಾವಿ ಪರೀಕ್ಷೆಗೆ ಸಲ್ಲಿಸಿದ ಅರ್ಜಿಯಲ್ಲಿದ್ದಂತೆ ನಮೂದಿಸಲಾಗಿದೆ. ಯಾವುದೇ ಕಾರಣಕ್ಕೂ ಇವುಗಳ ಬದಲಾವಣೆಗೆ ಅವಕಾಶವಿಲ್ಲ.

14. ಮುಖ್ಯ ಪರೀಕ್ಷೆಗೆ ಪ್ರಶ್ನೆ ಸಹಿತ ಉತ್ತರ ಪತ್ರಿಕೆ **(Question based Answer Booklet)**ನೀಡಲಾಗುತ್ತದೆ. ಆದುದರಿಂದ ಅಭ್ಯರ್ಥಿಗಳು ಉತ್ತರ ಪತ್ರಿಕೆಯ ಮೇಲಿನ ಪುಟದಲ್ಲಿನ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

15. ಪ್ರಶ್ನೆ ಸಹಿತ ಉತ್ತರ ಪತ್ರಿಕೆಯಲ್ಲಿ ಪ್ರಶ್ನೆಗಳಿಗೆ ಮಾತ್ರ ಉತ್ತರಗಳನ್ನು ಬರೆಯಬೇಕು. ಅನಾವಶ್ಯಕ ಬರಹಗಳಿದ್ದಲ್ಲಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು. ಉದಾ: ಓಂ, ಶ್ರೀ ಇತರೆ ಚಿಹ್ನೆಗಳು , ಮೊಬೈಲ್ ಸಂಖ್ಯೆ, ಹೆಸರು ಇತ್ಯಾದಿಗಳನ್ನು ಬರೆಯತಕ್ಕದ್ದಲ್ಲ.

16. ಅಭ್ಯರ್ಥಿಗಳು ಪರೀಕ್ಷಾ ಸಮಯದಲ್ಲಿ ಒಂದೇ ಬಣ್ಣದ ಶಾಹಿಯ ಪೆನ್ನನ್ನು ಮಾತ್ರ ಉಪಯೋಗಿಸತಕ್ಕದ್ದು, ಯಾವುದೇ ಕಾರಣಕ್ಕೂ ಬೇರೆ ಬೇರೆ ಬಣ್ಣಗಳ ಶಾಹಿಯ ಪೆನ್ನುಗಳನ್ನು ಬಳಸಬಾರದು. ಹೈಲೈಟರ್‌ಗಳನ್ನು ಉಪಯೋಗಿಸಬಾರದು. ಅನಿವಾರ್ಯ ಕಾರಣಗಳಿಂದ ಬೇರೆ ಬೇರೆ ಬಣ್ಣಗಳ ಶಾಹಿಯ ಪೆನ್ನುಗಳನ್ನು ಬಳಸಿದ್ದಲ್ಲಿ ಕೊಠಡಿಯ ಸಂವೀಕ್ಷಕರಿಂದ ದೃಢೀಕರಿಸಬೇಕು.

17. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆ ಇರುವ ಸ್ಥಳದಲ್ಲಿಯೇ ಕುಳಿತು ಪರೀಕ್ಷೆ ಬರೆಯತಕ್ಕದ್ದು ಮತ್ತು ನಾಮಿನಲ್ ರೋಲ್‌ನಲ್ಲಿ ತನ್ನ ನೋಂದಣಿ ಸಂಖ್ಯೆ ಮತ್ತು ಭಾವಚಿತ್ರ ಇರುವ ಅಂಕಣದಲ್ಲಿಯೇ ವಿವರಗಳನ್ನು ಭರ್ತಿ ಮಾಡಿ ಸಹಿ ಮಾಡತಕ್ಕದ್ದು. ಇಲ್ಲವಾದಲ್ಲಿ ಆಯೋಗವು ತೆಗೆದುಕೊಳ್ಳುವ ಶಿಸ್ತುಕ್ರಮಕ್ಕೆ ಬದ್ಧರಾಗಿರಬೇಕು.

18. ಅಧಿಸೂಚನೆ ಸಂಖ್ಯೆ :ಇ(1)227/2018-19/ ಪಿಎಸ್ ಸಿ, ದಿನಾಂಕ:05-09-2018ರಲ್ಲಿ ವಿವರಿಸಿದಂತೆ ನಿಗದಿಪಡಿಸಿದ ನಮೂನೆಯಲ್ಲಿ ಪಡೆದ ಪ್ರಮಾಣ ಪತ್ರಗಳನ್ನು ಮಾತ್ರ ಅಪ್ಲೋಡ್ ಮಾಡಬೇಕು. (ನಮೂನೆಗಳನ್ನು ಆಯೋಗದ ವೆಬ್ ಸೈಟ್ ನಲ್ಲಿ ತೋರಿಸಲಾಗಿದೆ) ನಿಗದಿತ ನಮೂನೆಯಲ್ಲಿ ಅಪ್ಲೋಡ್ ಮಾಡದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

19. ಸೇವೆಯಲ್ಲಿರುವ ಅಭ್ಯರ್ಥಿಗಳು ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗಾಗಿ ನೇಮಕಾತಿ ಪ್ರಾಧಿಕಾರದಿಂದ ಅನುಮತಿ ಪಡೆದ ಬಗ್ಗೆ ನಿರಾಕ್ಷೇಪಣಾ ಪ್ರಮಾಣ ಪತ್ರದ ಪ್ರತಿಯನ್ನು ಅರ್ಜಿಯೊಂದಿಗೆ ಅಪ್ಲೋಡ್ ಮಾಡಬೇಕು.

20. ಮುಖ್ಯ ಪರೀಕ್ಷೆಗೆ ನೀಡುವ ಪ್ರವೇಶ ಪತ್ರವು ತಾತ್ಕಾಲಿಕ. ಏನಾದರೂ ತಪ್ಪು/ಅಕ್ರಮಗಳು ಕಂಡು ಬಂದಲ್ಲಿ ಅಭ್ಯರ್ಥಿತನವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರ ಆಯೋಗಕ್ಕಿರುತ್ತದೆ.

21. ಅಭ್ಯರ್ಥಿಗಳು ಅರ್ಜಿಯೊಂದಿಗೆ ಅಪ್ಲೋಡ್ ಮಾಡಬೇಕಾದ ದಾಖಲೆಗಳು :

1) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ/ ಎಸ್.ಎಸ್.ಎಲ್.ಸಿ ವರ್ಗಾವಣೆಯ ಪ್ರಮಾಣ ಪತ್ರ /ಜನ್ಮ ದಿನಾಂಕವನ್ನು ತೋರಿಸುವ ಸಂಚಿತ ದಾಖಲೆಯ ಉಧೃತ ಭಾಗ **Extract of cumulative record).**

2) ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪದವಿಯ ಘಟಿಕೋತ್ಸವ ಪ್ರಮಾಣ ಪತ್ರ ಅಥವಾ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್‌ರವರಿಂದ ಪಡೆದ ಪ್ರಾವಿಷನಲ್ ಡಿಗ್ರಿ ಸರ್ಟಿಫಿಕೇಟ್ ಅಥವಾ ಎಲ್ಲಾ ವರ್ಷಗಳ ಅಂಕಪಟ್ಟಿಗಳು.

3) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, ಪ್ರವರ್ಗ-2ಎ, 2ಬಿ, 3ಎ, 3ಬಿ ಮಿಸಲಾತಿ ಅಭ್ಯರ್ಥಿಗಳು ನಮೂನೆ ಡಿ/ಇ/ಎಫ್ ನಲ್ಲಿ ತಹಶೀಲ್ದಾರ್‌ರಿಂದ ಪಡೆದ ಪ್ರಮಾಣ ಪತ್ರ.(ಮೀಸಲಾತಿ ಕೋರಿದ್ದಲ್ಲಿ)

4) ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ-1 ಮತ್ತು 2ರಲ್ಲಿ (ಮೀಸಲಾತಿ ಕೋರಿದ್ದಲ್ಲಿ)

5) ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (ಮೀಸಲಾತಿ ಕೋರಿದ್ದಲ್ಲಿ).

6) ಸೈನಿಕ ಸೇವೆಯಿಂದ ಬಿಡುಗಡೆಯಾದ/ ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಪೂರ್ಣವಾಗಿ) ಮತ್ತು ಪೆನ್ ಷನ್ ಪಡೆಯುತ್ತಿರುವ ದಾಖಲೆಯ ಪ್ರತಿ/ ಮಾಜಿ ಸೈನಿಕರ ಅವಲಂಬಿತರಾಗಿದ್ದಲ್ಲಿ- ನಿಗದಿತ ನಮೂನೆಯಲ್ಲಿ ಮಾಜಿ ಸೈನಿಕರು ಸೇವೆಯಲ್ಲಿರುವಾಗ ಮೃತಪಟ್ಟಿರುವ ಅಥವಾ ಖಾಯಂ ಆಗಿ ಗಾಯಗೊಂಡಿರುವ ಪ್ರಮಾಣ ಪತ್ರ (ಮಾಜಿ ಸೈನಿಕ ಮೀಸಲಾತಿ ಕೋರಿದ್ದಲ್ಲಿ).

7) ಸೇವೆಯಲ್ಲಿರುವ ಅಭ್ಯರ್ಥಿಗಳು ನಿರಾಕ್ಷೇಪಣಾ **(NOC)** ಪ್ರಮಾಣ ಪತ್ರ.

8) ದೈಹಿಕ ದೇಹದಾರ್ಢ್ಯತಾ ಪ್ರಮಾಣ ಪತ್ರ (Physical standard certificate) ನಿಗದಿತ ನಮೂನೆಯಲ್ಲಿ.

ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ:09-10-2018ರೊಳಗಾಗಿ ನಿಗದಿತ ನಮೂನೆಯಲ್ಲಿ (ಆಯೋಗದ ವೆಬ್ ಸೈಟ್ ರಲ್ಲಿ ಲಭ್ಯವಿದೆ) ಪಡೆದಿರುವ ಮೀಸಲಾತಿ ಪ್ರಮಾಣ ಪತ್ರಗಳನ್ನೇ ಅರ್ಜಿಯೊಂದಿಗೆ ಅಪ್ಲೋಡ್ ಮಾಡತಕ್ಕದ್ದು. ನಂತರ ಪಡೆದ ಹಾಗೂ ಚಾಲ್ತಿಯಲ್ಲಿರದ ಪ್ರಮಾಣ ಪತ್ರಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು/ಮೀಸಲಾತಿಯನ್ನು ತಿರಸ್ಕರಿಸಲಾಗುವುದು.

ಸಹಿ/-

(ಜಿ.ಸತ್ಯವತಿ)

ಕಾರ್ಯದರ್ಶಿ,

ಕರ್ನಾಟಕ ಲೋಕ ಸೇವಾ ಆಯೋಗ.